◆ ನಟಿಯಾಗಿದ್ದವರು 'ಅಭಿನಯ ಶಾರದೆ' ಆದುದು ಹೇಗೆ?

'ಕಲಾ ಕೋಗಿಲೆ' ನನಗೆ ಅಭಿಮಾನಿಗಳು ಕೊಟ್ಟ ಮೊದಲ ಟೈಟಲ್. ಆಗ ಯಾವುದಾದರೂ ಟೈಟಲ್ ಕೊಡಬೇಕೆಂದರೆ ಯೋಚನೆ ಮಾಡಿ ನಿರ್ಧರಿಸುತ್ತಿದ್ದರು. ದೊಡ್ಡ ದೊಡ್ಡವರೆಲ್ಲ ಸೇರಿ ಯೋಚಿಸುತ್ತಿದ್ದರು. ನನ್ನ ಧ್ವನಿ ಇಂಪಾಗಿದ್ದರಿಂದ 'ಕಲಾ ಕೋಗಿಲೆ' ಎಂದರು. ನಂತರ, ನಾನು ಚೆನ್ನಾಗಿ ಅಭಿನಯಿಸುವೆ ಎನ್ನಿಸಿದ್ದರಿಂದ, ಯಾವ ಕ್ಯಾರೆಕ್ಟರ್ ಕೂಡ ಮಾಡಬಲ್ಲೆ ಅನ್ನಿಸಿದ್ದರಿಂದ (ಆಯ್ದುಕೊಂಡು ತಿನ್ನುವವಳಿಂದ ಹಿಡಿದು ರಾಜಕುಮಾರಿವರೆಗೆ ಎಲ್ಲ ರೀತಿಯ ಪಾತ್ರಗಳನ್ನು ಮಾಡಿದ್ದೇನೆ. ಎಲ್ಲ ಪಾತ್ರಗಳಲ್ಲೂ ಜನ ಒಪ್ಪಿಕೊಂಡಿದ್ದಾರೆ. ಅದರಲ್ಲೂ ರಾಜಕುಮಾರ್ ಜೊತೆ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಹೆಮ್ಮೆ ನನ್ನದು). 'ಅಭಿನಯ ಶಾರದೆ' ಎನ್ನುವ ಟೈಟಲ್ ಕೊಟ್ಟರು; ದೊಡ್ಡದೊಂದು ವೀಣೆ ಉಡುಗೊರೆಯಾಗಿ ಕೊಟ್ಟು, ಹರಸಿದರು. ಆ ಟೈಟಲ್ ನನ್ನ ಜೊತೆಗೆ ಉಳಿದುಬಂತು.

ನನಗೆ ಗೊತ್ತು. ಅವರನ್ನು ನಾನು 'ಪುಟ್ಟು' ಎಂದೇ ಕರೆಯುತ್ತಿದ್ದುದು. (ಕೆಲವರನ್ನು ನಾನು ನನ್ನದೇ ಹೆಸರಿನಿಂದ ಕರೆಯುವೆ. ರಾಜಕುಮಾರ್ ಅವರನ್ನು 'ರಾಜ್' ಎಂದೇ ಕರೆಯುತ್ತಿದ್ದೆ. ನಾನೊಬ್ಬಳೇ ಅವರನ್ನು ಹೆಸರು ಹಿಡಿದು ಕರೆಯುತ್ತಿದ್ದುದು). 'ಸಾವಿರ ಮೆಟ್ಟಿಲು' ಸಿನಿಮಾ ಸಂದರ್ಭದಲ್ಲಿ ಮುಹೂರ್ತಕ್ಕೆ ಹೋಗುವಾಗ, 'ಯಾರೋ ಹೊಸ ನಿರ್ದೇಶಕ, ಕೋಪಿಷ್ಠನಂತೆ' ಎನ್ನುವ ವಿಷಯವಷ್ಟೇ ತಿಳಿದಿತ್ತು. ಕಾರು ಇಳಿದಾಗ ನೋಡಿದರೆ ಅಲ್ಲಿದ್ದುದು ಪುಟ್ಟು. 'ಅವರೇ ಪುಟ್ಟಣ್ಣ ಕಣಗಾಲ್' ಎಂದು ನನ್ನೊಂದಿಗೆ ಬಂದವರು ಹೇಳಿದರು. 'ಅವರು ನಮ್ಮ ಪುಟ್ಟು' ಎನ್ನುತ್ತಾ, 'ಪುಟ್ಟು' ಎಂದು ಕೂಗಿದೆ. 'ಜಯಮ್ಮ' ಎಂದು ಪುಸ್ತಕ ಓದುತ್ತಿದ್ದ ಅವರು ಓಡಿಬಂದರು. ಕೈಹಿಡಿದುಕೊಂಡು ಕುಶಲ ವಿಚಾರಿಸಿದರು.

ಪುಟ್ಟಣ್ಣ ಎಂದರೆ ನನಗೆ ಬಹಳ ಆತ್ಮೀಯತೆ. ಅವರು ಹುಷಾರಿಲ್ಲದೆ ಆಸ್ಪತ್ರೆಯಲ್ಲಿದ್ದಾಗ ನೋಡಲು ಹೋಗಿದ್ದೆ. ಅವರನ್ನು ಹಾಸಿಗೆಯ ಮೇಲೆ ಕೂರಿಸಿದ್ದರು. ನನ್ನನ್ನು ನೋಡಿದವರೇ ಅಳತೊಡಗಿದರು. 'ಎರಡು ದಿನಗಳಿಂದ ನನ್ನನ್ನು ಹೀಗೆ ಕೂರಿಸಿದ್ದಾರೆ. ಮಲಗಿಸುವಂತೆ ಡಾಕ್ಟರ್‌ಗೆ ಹೇಳು ಜಯಮ್ಮ' ಎಂದರು. 'ನಿಮಗೆ ಏನೂ ಆಗಿಲ್ಲ. ನಿರ್ದೇಶಕರಾಗಿ ನಮ್ಮನ್ನೆಲ್ಲ ಕಂಟ್ರೋಲ್ ಮಾಡ್ತೀರಿ. ಈಗ ನಿಮ್ಮನ್ನು ಕಂಟ್ರೋಲ್ ಮಾಡುವವರು ಯಾರೂ ಇಲ್ಲವಾ?' ಎಂದು ದಬಾಯಿಸಿ ಧೈರ್ಯ ಹೇಳಿದೆ. 'ನಾಳೆ ಬರುತ್ತೇನೆ' ಎಂದು ಬೀಳ್ಕೊಂಡೆ. ಮಾರನೇ ದಿನವೇ ಅವರು ಇನ್ನಿಲ್ಲವೆನ್ನುವ ದೃಶ್ಯ. ಒಂದು ನಕ್ಷತ್ರ ಉದುರಿಹೋಯಿತು.

'ಎಡಕಲ್ಲು ಗುಡ್ಡದ ಮೇಲೆ' ಸಿನಿಮಾದಲ್ಲಿ ನಟಿಸುವುದಿಲ್ಲ ಎಂದಿದ್ದೆ. ಪದೇ ಪದೇ ತಪ್ಪು ಮಾಡುವ ಪಾತ್ರ ಸರಿಯಿಲ್ಲ ಎಂದು ವಾದಿಸಿದ್ದೆ. 'ಇಲ್ಲ ಜಯಮ್ಮ, ಈ ಪಾತ್ರದಲ್ಲಿ ನೀನು ನಟಿಸಲೇಬೇಕು. ಸಿನಿಮಾ ಚೆನ್ನಾಗಿ ಬರದಿದ್ದರೆ ಬೈಯುವೆಯಂತೆ' ಎಂದು ಒಪ್ಪಿಸಿದರು. ಸಿನಿಮಾ ಜನರಿಗೆ ಇಷ್ಟವಾಯಿತು, ಆ ಚಿತ್ರದ 'ವಿರಹ' ಗೀತೆ ಅಪಾರ ಜನಪ್ರಿಯವಾಯಿತು.

ಬಾಲಣ್ಣನವರೊಂದಿಗಿನ ಒಡನಾಟವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಒಂದು ಸಲ ಶೂಟಿಂಗ್ ನಡೆಯುತ್ತಿತ್ತು. ಮಧ್ಯಾಹ್ನದ ವೇಳೆಗೆ ಅವರು ಬಂದರು. ಅದೇ ಸಮಯಕ್ಕೆ ಊಟದ ವ್ಯಾನ್ ಬಂತು. ಶೂಟಿಂಗ್ ನೋಡುತ್ತಿದ್ದ ಅವರು 'ವ್ಯಾನ್ ಬಂದ್ಬಿಡ್ತಾ... ಸಾಂಬಾರ್ ವಾಸನೆ ಸಿಕ್ಕಿಬಿಡ್ತಾ...' ಎಂದು ತಲೆ ಚಚ್ಚಿಕೊಂಡರು. 'ರಿಹರ್ಸಲ್‌ನಲ್ಲಿ ಅಷ್ಟೊಂದು ಚೆನ್ನಾಗಿ ಮಾಡಿದೆ. ಟೇಕ್‌ನಲ್ಲಿ ಊಟದ ಕಡೆಗೆ ಗಮನ ಹೋಗಿಬಿಡ್ತಾ' ಎಂದು ಬೈದರು. ಅಂದಿನಿಂದ ಅವರು ನನ್ನನ್ನು 'ಸಾಂಬಾರು' ಎಂದೇ ಕರೆಯತೊಡಗಿದರು. ಬಾಲಣ್ಣನವರ 'ಅಭಿಮಾನ್ ಸ್ಟುಡಿಯೋ'ದಲ್ಲಿ ನಮ್ಮ ನಿರ್ಮಾಪಕರು ಒಂದೊಂದು ದೃಶ್ಯಗಳನ್ನು ಚಿತ್ರೀಕರಿಸಿದ್ದರೂ ಬಾಲಣ್ಣ ಉಳಿದುಕೊಳ್ಳುತ್ತಿದ್ದರು.



> ಪತ್ರಿಕೆಯಲ್ಲಿ ಒಮ್ಮೆ ನನ್ನ ಬಗ್ಗೆ 'ಅಬ್ಬಬ್ಬಾ! ಜಯಂತಿ ಎಷ್ಟು ಭಾರ' ಎಂದು ಬರೆದಿದ್ದರು. ಅಬ್ಬಬ್ಬಾ! ಜಯಂತಿ ಎಷ್ಟು ದಪ್ಪ ಎಂದು ಬರೆಯಬೇಕಿತ್ತಲ್ಲವೇ?

◆ ನಿಮ್ಮ ಓರಗೆಯ ನಟಿಯರಿಗೆ ಹೋಲಿಸಿದರೆ ವಿಭಿನ್ನ ಪಾತ್ರಗಳಲ್ಲಿ ನಟಿಸುವ ಹೆಚ್ಚು ಅವಕಾಶಗಳು ನಿಮಗೆ ದೊರೆತವು. ಇದು ಸಾಧ್ಯವಾಗಿದ್ದು ಹೇಗೆ?

ಬಿ.ಎಸ್. ರಂಗಾ ಅವರ 'ಮಣ್ಣಿನ ಮಗಳು' ಚಿತ್ರದಲ್ಲಿ ದ್ವಿಪಾತ್ರದಲ್ಲಿ ನಟಿಸಿದ್ದೇನೆ (ತಾಯಿ–ಮಗಳ ಪಾತ್ರ.) ಅಮ್ಮನ ಪಾತ್ರಕ್ಕೆ ಕೂದಲು ಬಿಳಿ ಮಾಡಿಕೊಂಡಾಗ, ಕೆಲವರು ಆ ಪಾತ್ರದಲ್ಲಿ ಅಭಿನಯಿಸುವುದು ಬೇಡ ಎಂದರು. ಆದರೆ, ವಿಭಿನ್ನ ರೀತಿಯ ಪಾತ್ರಗಳು ಬಂದಾಗ ನಾನೆಂದೂ ಒಲ್ಲೆ ಎನ್ನಲಿಲ್ಲ. ಇಂತಹುದೇ ಪಾತ್ರ ಎಂದು ಅಂಟಿ ಕೂರಲಿಲ್ಲ. ಕೆಲವರಿಗೆ ಅಳುಬುರುಕಿ ಪಾತ್ರಗಳು ಸೂಟ್ ಆಗುತ್ತವೆ. ಕೆಲವರು ಕಾಮಿಡಿಗೆ, ಮತ್ತೆ ಕೆಲವರು ಗ್ಲಾಮರ್‌ಗೆ ಅಂಟಿಕೊಳ್ಳುತ್ತಾರೆ. ಬಡವಿಯ ಪಾತ್ರಕ್ಕೂ ನಾನು ಓಕೆ, ಶ್ರೀಮಂತನ ಮಗಳ ಪಾತ್ರಕ್ಕೂ ಓಕೆ. ಇತ್ತೀಚೆಗೆ 'ಪರೋಪಕಾರಿ' ಚಿತ್ರವನ್ನು ಮತ್ತೊಮ್ಮೆ ನೋಡಿದೆ. ರಾಜ್‌ಕುಮಾರ್ ಜೊತೆಗೆ 'ಹೋಗೊ, ಬಾರೊ' ಎಂದು ಜಗಳವಾಡುವ ದೃಶ್ಯ. ವೆರೈಟಿ ಇದ್ದರೆ ಚಂದ ಅಲ್ಲವೇ?

◆ ನಾಯಕಿಪ್ರಧಾನ ಸಿನಿಮಾಗಳಲ್ಲಿ ನಟಿಸಿದ ನಿಮಗೆ, ಇಂದಿನ ನಾಯಕಿಯರ ಪಾತ್ರಗಳ ಬಗ್ಗೆ ಏನನ್ನಿಸುತ್ತದೆ?

ಆಗ ಪಾತ್ರಗಳ ಬಗ್ಗೆ ಗಮನ ಇತ್ತು. ಸಬ್ಜೆಕ್ಟ್ ಇಲ್ಲದೆ ಸಿನಿಮಾ ನಿರ್ಮಿಸುತ್ತಿರಲಿಲ್ಲ. ಜನರಿಗೆ ಏನನ್ನಾದರೂ ಸಂದೇಶ ತಲುಪಿಸುವ ಉದ್ದೇಶ ಚಿತ್ರತಂಡಕ್ಕೆ ಇರುತ್ತಿತ್ತು. ಈಗ ಹಾಗೆ ಯೋಚಿಸುವವರು ಯಾರಿದ್ದಾರೆ? 'ನಾಯಕನಟನ ಕಾಲ್‌ಶೀಟ್ ಸಿಕ್ಕಿದೆ, ಸಿನಿಮಾ ಮಾಡಿ' ಎನ್ನುವವರೇ ಹೆಚ್ಚು. ಟ್ರೆಂಡ್ ಬದಲಾಗಿದೆ. ನಾನು ಈಗಲೂ ಕೆಲವು ಸಿನಿಮಾಗಳನ್ನು ನೋಡುತ್ತೇನೆ. ಈಗಿನ ಟ್ರೆಂಡ್‌ಗೆ ತಕ್ಕಂತೆ ಕಥೆಗಳು, ನಾಯಕಿಯರು ಬರುತ್ತಿದ್ದಾರೆ. ನಮ್ಮ ಕಾಲದಲ್ಲಿ ಹೀರೋಯಿನ್ ಮುಖದ ಭಾವನೆಗಳ ಮೇಲೆ ಕ್ಯಾಮೆರಾ ಕೇಂದ್ರೀಕೃತವಾಗುತ್ತಿತ್ತು. ಈಗ ಹೀರೋಯಿನ್ ಯಾರೆಂದು ಕಂಡು ಹಿಡಿಯುವಷ್ಟರಲ್ಲಿ ತೆರೆಯ ಮೇಲೆ ಬಂದು ಮಾಯವಾಗಿಬಿಟ್ಟಿರುತ್ತಾರೆ.

◆ ವೃತ್ತಿಜೀವನದ ಬೆಳವಣಿಗೆಯಲ್ಲಿ ಚಿತ್ರರಂಗದವರ ಆಚೆಗೆ ತಕ್ಷಣಕ್ಕೆ ನಿಮ್ಮ ನೆನಪಿಗೆ ಬರುವವರು ಯಾರು?

ಪತ್ರಕರ್ತರು. ನಮ್ಮ ಕಾಲದಲ್ಲಿ ಪತ್ರಿಕೆಯವರನ್ನು ಕಂಡರೆ ಕಲಾವಿದರು ಹೆದರಿಕೊಳ್ಳುತ್ತಿದ್ದರು. ಅವರು ಉದ್ದನೆ ಪಟ್ಟಿಗಳನ್ನು ಬರೆದುಕೊಂಡು ಬರುತ್ತಿದ್ದರು. ಆ ಪ್ರಶ್ನೆಗಳಿಗೆ ಏನೆಂದು ಉತ್ತರಿಸಲು ತಿಳಿಯದೆ ಕಲಾವಿದರು ಅಳುಕುತ್ತಿದ್ದರು. ನನ್ನ ವಿಷಯದಲ್ಲಿ ಮಾತ್ರ ಪತ್ರಕರ್ತರದು ಮೊದಲಿನಿಂದಲೂ ವಿಶ್ವಾಸ. ತಮ್ಮ ಮನೆಯ ಸದಸ್ಯಳೆಂದೇ ತಿಳಿದಿದ್ದಾರೆ.

ಲಂಕೇಶ್ ಪತ್ರಿಕೆಯಲ್ಲಿ ಒಮ್ಮೆ ನನ್ನ ಬಗ್ಗೆ 'ಅಬ್ಬಬ್ಬಾ! ಜಯಂತಿ ಎಷ್ಟು ಭಾರ' ಎಂದು ಬರೆದಿದ್ದರು. 'ನನ್ನ ಭಾರ ಗೊತ್ತಾಗಲಿಕ್ಕೆ ಲಂಕೇಶ್ ನನ್ನನ್ನು ಯಾವಾಗ ಎತ್ತಿಕೊಂಡರು. ಅಬ್ಬಬ್ಬಾ! ಜಯಂತಿ ಎಷ್ಟು ದಪ್ಪ ಎಂದು ಬರೆಯಬೇಕಿತ್ತಲ್ಲವೇ' ಅನ್ನಿಸಿತು. ಲಂಕೇಶ್ ಪುತ್ರಿ ಗೌರಿ ನನ್ನ ಗೆಳತಿ. ಅವರಿಗೆ ಫೋನ್ ಮಾಡಿ, 'ಬೇಕಿದ್ದರೆ ನಿಮ್ಮ ತಂದೆ ಒಮ್ಮೆ ನನ್ನನ್ನು ಲಿಫ್ಟ್ ಮಾಡಿ ನೋಡಲಿ' ಎಂದು ತಮಾಷೆ ಮಾಡಿದ್ದೆ.

◆ ಈಗಲೂ ಅಭಿನಯಿಸುವ ಆಸಕ್ತಿ ಇದೆಯೇ?

ಖಂಡಿತಾ. ನನ್ನ ವಯಸ್ಸಿಗೆ ತಕ್ಕಂತಹ ಪಾತ್ರಗಳ ನಿರೀಕ್ಷೆಯಲ್ಲಿರುವೆ. ಇತ್ತೀಚೆಗಷ್ಟೇ ಅನಾರೋಗ್ಯದಿಂದ ಚೇತರಿಸಿಕೊಂಡಿರುವೆ. ಒಳ್ಳೆಯ ಪಾತ್ರಗಳು ದೊರೆತರೆ ಖಂಡಿತಾ ಅಭಿನಯಿಸುವೆ. ■